# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಶುಕ್ರವಾರ ೧೯, ಡಿಸೆಂಬರ್, ೨೦೨೫ (ಮಾರ್ಗಶಿರ, ೨೮, ಶಕವರ್ಷ, ೧೯೪೭)<br>BENGALURU, FRIDAY 19, DECEMBER, 2025 (MARGASHIRA, 28, SHAKAVARSHA, 1947) | ನಂ. ೮೨೩<br>No. 823 |
|---|---|---|


<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ಬೆಂಗಳೂರು ನಗರ ಪಾಲಿಕೆಗಳ ವಾರ್ಡುಗಳಿಗೆ ಮೀಸಲಾತಿ ನಿಗದಿಪಡಿಸಲು ಮಾರ್ಗಸೂಚಿಗಳನ್ನು ನೀಡುವ ಬಗ್ಗೆ- ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 45 ಶಾಸನ 2024, ಬೆಂಗಳೂರು, ದಿನಾಂಕ: 24.04.2025
2. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 100 ಬಿಬಿಎಸ್ 2025 ಭಾ-2, ದಿನಾಂಕ:14-05-2025
3. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 170 ಬಿಬಿಎಸ್ 2025, ದಿನಾಂಕ: 02-09-2025
4. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 183 ಬಿಬಿಎಸ್ 2025, ದಿನಾಂಕ: 02-09-2025
5. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 240 ಬಿಬಿಎಸ್ 2025 (ಇ), ದಿನಾಂಕ: 24-09-2025.
6. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 289 ಬಿಬಿಎಸ್ 2025, ದಿನಾಂಕ: 19-11-2025 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:01-12-2025
7. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 290 ಬಿಬಿಎಸ್ 2025, ದಿನಾಂಕ: 19-11-2025 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ: 01-12-2025
8. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 291 ಬಿಬಿಎಸ್ 2025, ದಿನಾಂಕ: 19-11-2025 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:01-12-2025
9. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 292 ಬಿಬಿಎಸ್ 2025, ದಿನಾಂಕ: 19-11-2025 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:01-12-2025
10. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 293 ಬಿಬಿಎಸ್ 2025, ದಿನಾಂಕ: 19-11-2025 ಹಾಗೂ ತಿದ್ದುಪಡಿ ಅಧಿಸೂಚನೆಗಳು ದಿನಾಂಕ:01-12-2025 ಮತ್ತು 18-12-2025.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸುವರ್ಣ ವಿಧಾನಸೌಧ, ಬೆಳಗಾವಿ ಇಲ್ಲಿ ದಿನಾಂಕ:11-12-2025 ರಂದು ನಡೆದ ಸಭೆಯ ನಡಾವಳಿಗಳು.

* * * * *

ಪ್ರಸ್ತಾವನೆ:

1. ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪರಿಣಾಮಕಾರಿ ನಗರ ಆಡಳಿತಕ್ಕಾಗಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ

ಅಧಿನಿಯಮ ಸಂಖ್ಯೆ: 36) (ಸಂಕ್ಷಿಪ್ತವಾಗಿ '2024ರ ಅಧಿನಿಯಮ') ಅನ್ನು ಹೊರಡಿಸಲಾಗಿದೆ. 2024ರ ಅಧಿನಿಯಮವನ್ನು ದಿನಾಂಕ:15-05-2025 ರಿಂದ ಜಾರಿಗೆ ಬರತಕ್ಕದ್ದೆಂದು ಮೇಲೆ ಓದಲಾದ ಕ್ರಮ ಸಂಖ್ಯೆ:(2)ರ ಸರ್ಕಾರದ ಅಧಿಸೂಚನೆಯಲ್ಲಿ ಗೊತ್ತುಪಡಿಸಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಸರ್ಕಾರದ ಅಧಿಸೂಚನೆಯಲ್ಲಿ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳು ಎಂಬ 5 ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ:(4)ರ ಸರ್ಕಾರದ ಅಧಿಸೂಚನೆಯಲ್ಲಿ 2024ರ ಅಧಿನಿಯಮದ ಪ್ರಕರಣ 29 ರ ಉಪ ಪ್ರಕರಣ (2)ರನ್ವಯ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ಐದು ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡ್‌ಗಳ ಪುನರ್ ವಿಂಗಡಣೆಗಾಗಿ 03 ತಿಂಗಳ ಅವಧಿಗೆ ಸೀಮಿತವಾಗಿ ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗವನ್ನು ರಚಿಸಲಾಗಿದೆ. ಸದರಿ ಆಯೋಗದ ಶಿಫಾರಸ್ಸಿನ ಅನುಸಾರ ಐದೂ ನಗರ ಪಾಲಿಕೆಗಳಲ್ಲಿ ವಾರ್ಡುವಾರು ಕ್ಷೇತ್ರ ಪುನರ್ ವಿಂಗಡಣೆಯ ಐದು ಪ್ರತ್ಯೇಕ ಕರಡುಗಳನ್ನು ದಿನಾಂಕ: 30-09-2025ರ ಐದು ಪ್ರತ್ಯೇಕ ಅಧಿಸೂಚನೆಗಳಲ್ಲಿ ಹೊರಡಿಸಿ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ/ ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ: (6) ರಿಂದ (10)ರವರೆಗಿನ ಸರ್ಕಾರದ ಅಧಿಸೂಚನೆ ಮತ್ತು ತಿದ್ದುಪಡಿ ಅಧಿಸೂಚನೆಗಳಲ್ಲಿ ಕಾಲಮಿತಿಯಲ್ಲಿ ಸ್ವೀಕೃತಗೊಂಡ ಎಲ್ಲಾ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಿ ವಾರ್ಡುಗಳ ಪುನರ್ ವಿಂಗಡಣಾ ಆಯೋಗವು ಮಾಡಿದ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿ, ಕ್ರಮವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ, ಬೆಂಗಳೂರು ಉತ್ತರ ನಗರ ಪಾಲಿಕೆ ಮತ್ತು ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳ ವಾರ್ಡುವಾರು ಕ್ಷೇತ್ರ ಪುನರ್ ವಿಂಗಡಣೆಯ ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

5. ಮೇಲೆ ಓದಲಾದ ಕ್ರಮ ಸಂಖ್ಯೆ:(5)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ನಗರ ಪಾಲಿಕೆಗಳ ವಾರ್ಡುಗಳ ಮೀಸಲಾತಿ ನಿಗದಿಪಡಿಸುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಸದಸ್ಯರುಗಳನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

6. ಭಾರತ ಸಂವಿಧಾನದ ಅನುಚ್ಛೇಧ 243-ಟಿ ರನ್ವಯ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಅಧಿನಿಯಮದ ಕಲಂ 29(3) ಮತ್ತು(4) ರಲ್ಲಿ ಪ್ರತಿ ನಗರ ಪಾಲಿಕೆಯ ವಾರ್ಡುಗಳಿಗೆ ಕೆಳಗಿನಂತೆ ಮೀಸಲಾತಿಯನ್ನು ನಿಗದಿಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ:

29. **Delimitation of Wards.-**

XXX

(3) The Government shall by order determine,-

(a) the wards into which each of the City Corporations, for the purpose of its elections, be divided:

Provided that the number of wards in each City Corporation shall not be more than one hundred and fifty;

(b) the extent of each ward; and

(c) seats shall be reserved in a City Corporation,-

(i) for the Scheduled Castes; and

(ii) for the Scheduled Tribes.

- and the number of seats so reserved for Scheduled Castes and Scheduled Tribes shall bear as nearly as may be, the same proportion to the total number of seats to be filled by direct election in each City Corporation as the population of the Scheduled Castes and of the Scheduled Tribes, respectively, in the said City Corporation bears to the total population of that Corporation.

(d) Such number of seats which shall as nearly as may be, one third of the total number of seats to be filled by direct election in each City Corporation shall be reserved for persons belonging to the Backward Classes.
Provided that, out of the seats reserved under this sub-section, eighty percent of the total number of such seats shall be reserved for the persons falling under category "A" and the remaining twenty percent of the seats shall be reserved for the persons falling under category "B".

Provided further that, if no person falling under category "A" is available, the seats reserved for that category shall also be filled by the persons falling under category "B" and vice-versa.

Provided also that then number of seats so reserved for the Backward Classes under this sub-section shall be so determined, that the total number of seats reserved for the Scheduled Castes and Scheduled Tribes and the Backward Classes under this sub-section shall not exceed fifty percent of the total number of seats in the City Corporation. In case, as per the number of seats reserved for the Scheduled Castes, the Scheduled Tribes and the Backward Classes together exceeds fifty percent of the total number of directly elected seats in the City Corporation, then the seats for the Backward Classes shall be proportionately reduced to ensure that the total reserved seats do not exceed fifty percent.

(4) Not more than fifty percent of the seats reserved for each category of persons belonging to Scheduled Castes, Scheduled Tribes and Backward Classes as well as the non-reserved seats to be filled by direct election in a City Corporation, shall be reserved for women:

Provided that, the seats reserved in sub-sections (3) and (4) shall be allotted by rotations to different wards of the elections of the City Corporation.

7. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ನಗರ ಪಾಲಿಕೆಗಳ ವಾರ್ಡುಗಳ ಮೀಸಲಾತಿ ನಿಗದಿಪಡಿಸುವ ಸಂಬಂಧವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿನ ಪರಿಶೀಲನಾ ಸಮಿತಿಯು ವಾರ್ಡುಗಳ ಮೀಸಲಾತಿ ನಿಗದಿಪಡಿಸುವ ಸಂಬಂಧವಾಗಿ ದಿನಾಂಕ:29-09-2025, 15-11-2025 ಮತ್ತು ದಿನಾಂಕ:11-12-2025ರಂದು ಸಭೆಗಳನ್ನು ನಡೆಸಿ, ಮೀಸಲಾತಿಯನ್ನು ನಿಗದಿಪಡಿಸುವ ಬಗ್ಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿ, ದಿನಾಂಕ:11-12-2025 ರಂದು ನಡೆದ ಸಭೆಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ನಗರ ಪಾಲಿಕೆಗಳ ವಾರ್ಡುಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ಅನುಕೂಲವಾಗುವಂತೆ ಮಾರ್ಗಸೂಚಿಗಳನ್ನು ಕೂಡಲೇ ಹೊರಡಿಸಬೇಕಾಗುತ್ತದೆ ಎಂಬ ಅಂಶವನ್ನು ಸಮಿತಿಯು ಗಮನಿಸಿರುತ್ತದೆ. ಮುಂದುವರೆದು, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮೀಸಲಾತಿ ನಿಗದಿಪಡಿಸಲು ಮಾರ್ಗಸೂಚಿಗಳನ್ನು ಸರ್ಕಾರದ ಆದೇಶದ ಮೂಲಕ ಹೊರಡಿಸಿ, ಅದನ್ನು ಆಧರಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ನಗರ ಪಾಲಿಕೆಗಳ ವಾರ್ಡುಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ಕ್ರಮವಹಿಸುವಂತೆ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

8. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ನಗರ ಪಾಲಿಕೆಗಳ ವಾರ್ಡುಗಳ ಮೀಸಲಾತಿ ನಿಗದಿಪಡಿಸುವ ಸಂಬಂಧವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿನ ಪರಿಶೀಲನಾ

ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಅದರಂತೆ ಗ್ರೇಟರ್ ಬೆಂಗಳೂರು ಪ್ರದೇಶದ 05 ನಗರ ಪಾಲಿಕೆಗಳ ವಾರ್ಡುಗಳಿಗೆ ನಡೆಯುವ ಚುನಾವಣೆಗಳಲ್ಲಿ ವಿವಿಧ ಪ್ರವರ್ಗಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವ ಸಂಬಂಧವಾಗಿ ಮಾರ್ಗಸೂಚಿಯನ್ನು ಹೊರಡಿಸಲು ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 240 ಬಿಬಿಎಸ್ 2025, ಬೆಳಗಾವಿ, ದಿನಾಂಕ: 19-12-2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024, ದಿನಾಂಕ: 15-05-2025 ರಿಂದ ಹೊಸದಾಗಿ ಜಾರಿಗೆ ಬಂದಿದ್ದು, ಅದರಂತೆ ರಚನೆಗೊಂಡ 1)ಬೆಂಗಳೂರು ಕೇಂದ್ರ ನಗರ ಪಾಲಿಕೆ, 2)ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ, 4) ಬೆಂಗಳೂರು ಉತ್ತರ ನಗರ ಪಾಲಿಕೆ ಮತ್ತು 5)ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳ ವಾರ್ಡುಗಳ ಪುನರ್ ವಿಂಗಡಣೆಯನ್ನು ಸರ್ಕಾರವು ಅಂತಿಮಗೊಳಿಸಿರುವುದರಿಂದ, ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿನ 05 ನಗರ ಪಾಲಿಕೆಗಳ ಚುನಾವಣೆಯಲ್ಲಿ ವಾರ್ಡುಗಳ ಮೀಸಲಾತಿಯನ್ನು ಜಾರಿಗೊಳಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿ ಆದೇಶಿಸಿದೆ.

1) ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ 29 (1) ರಲ್ಲಿ ನೀಡಲಾಗಿರುವ '**Explanation**- For the purpose of this section, 'population' means the population of the City published as per the relevant figures of the preceding census.' ಎಂಬ ಅಂಶದ ಹಿನ್ನೆಲೆಯಲ್ಲಿ ಮೀಸಲಾತಿಯನ್ನು ನಿಗದಿಪಡಿಸುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಜನಗಣತಿ ನಿರ್ದೇಶನಾಲಯವು ಅಧಿಕೃತವಾಗಿ ಪ್ರಕಟಿಸಿರುವ ಇತ್ತೀಚಿನ ಜನಗಣತಿಯಾದ 2011ರ ಜನಗಣತಿಯ ಮಾಹಿತಿಯನ್ನು ಆಧರಿಸಿ ಕ್ರಮವಹಿಸತಕ್ಕದ್ದು.

2) ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಂ 29(3) (ಸಿ) ಅನುಸಾರ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗಾಗಿ ಮೀಸಲಿರಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿನ ಆಯಾ ನಗರ ಪಾಲಿಕೆಯ ಒಟ್ಟು ಜನಸಂಖ್ಯೆಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಹಾಗೂ ಒಟ್ಟು ವಾರ್ಡುಗಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸತಕ್ಕದ್ದು.

3) ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಂ 29(3) (ಡಿ) ಅನುಸಾರ, ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿನ ಆಯಾ ನಗರ ಪಾಲಿಕೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವಾಗ ಒಟ್ಟು ವಾರ್ಡುಗಳ ಸಂಖ್ಯೆಯಲ್ಲಿ 1/3 ರಷ್ಟು ವಾರ್ಡುಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿರಿಸತಕ್ಕದ್ದು. ಹೀಗೆ ನಿಗದಿಪಡಿಸುವಾಗ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗಗಳು ಸೇರಿದಂತೆ ಒಟ್ಟು ಮೀಸಲಾತಿ ಪ್ರಮಾಣ ಶೇ.50 ರಷ್ಟನ್ನು ಮೀರುವಂತಿಲ್ಲ. ಒಂದು ವೇಳೆ ಒಟ್ಟು ಮೀಸಲಾತಿ ಪ್ರಮಾಣ ಶೇ.50 ರಷ್ಟನ್ನು ಮೀರಿದ್ದೇ ಆದಲ್ಲಿ ಹಿಂದುಳಿದ ವರ್ಗಗಳ ಮೀಸಲು ಸ್ಥಾನಗಳನ್ನು ಪ್ರಮಾಣಾನುಸಾರವಾಗಿ ಕಡಿಮೆಮಾಡತಕ್ಕದ್ದು.

4) ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿನ ಆಯಾ ನಗರ ಪಾಲಿಕೆಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸಂಬಂಧಪಟ್ಟಂತೆ ಮೀಸಲು ಸ್ಥಾನಗಳನ್ನು ನಿಗದಿಪಡಿಸುವಾಗ ವಾರ್ಡುಗಳಲ್ಲಿ ಆಯಾ ಪ್ರವರ್ಗದ ಇಳಿಮುಖವಾಗುವ (Desceding Order) ಜನಸಂಖ್ಯೆಯನ್ನು ಪರಿಗಣಿಸತಕ್ಕದ್ದು ಹಾಗೂ ಅದೇ ಬಗೆಯಾಗಿ ವಾರ್ಡುಗಳ ಕ್ರಮಪಟ್ಟಿಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಪ್ರತ್ಯೇಕವಾಗಿ ಸಿದ್ಧಪಡಿಸಿಕೊಳ್ಳತಕ್ಕದ್ದು.

5) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ಮೀಸಲಾತಿಯನ್ನು ನಿಗದಿಪಡಿಸುವಾಗ ಮೇಲಿನ ಕ್ರಮ ಸಂಖ್ಯೆ (4) ರಲ್ಲಿ ತಿಳಿಸಲಾದಂತೆ ಇಳಿಮುಖ ಜನಸಂಖ್ಯೆಯ ವಾರ್ಡುಗಳ ಪ್ರತ್ಯೇಕ ಕ್ರಮಪಟ್ಟಿಯಲ್ಲಿ ಈ ಕೆಳಗಿನ ಅನುಕ್ರಮದ (Sequence) ಪ್ರಕಾರ ಮೀಸಲಾತಿಯನ್ನು ನಿಗದಿಪಡಿಸತಕ್ಕದ್ದು:

"SC→ ST"

ಅದರಂತೆ, ಮೊದಲು ಅನುಸೂಚಿತ ಜಾತಿ ಪಟ್ಟಿಯಲ್ಲಿ ಅತೀ ಹೆಚ್ಚು ಜನ ಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಿದ ಬಳಿಕ ಅನುಸೂಚಿತ ಪಂಗಡದ ಪಟ್ಟಿಯಲ್ಲಿ ಅತೀ ಹೆಚ್ಚು ಜನ ಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಿ ಬಳಿಕ ಮತ್ತೆ ಅನುಸೂಚಿತ ಜಾತಿ ಪಟ್ಟಿಯಲ್ಲಿ ನಂತರದ ಅತೀ ಹೆಚ್ಚು ಜನ ಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸತಕ್ಕದ್ದು ಹಾಗೂ ಅದೇ ರೀತಿಯಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದಲ್ಲಿ ಪ್ರತ್ಯೇಕವಾಗಿ ಒಟ್ಟು ನಿಗದಿತ ಮೀಸಲಾತಿ ವಾರ್ಡ್‌ಗಳ ಸಂಖ್ಯೆ ಪೂರ್ಣಗೊಳ್ಳುವವರೆಗೆ ಮುಂದುವರೆಸತಕ್ಕದ್ದು.

6) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾದ ಸ್ಥಾನಗಳಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು. ಒಂದು ವೇಳೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾದ ಸ್ಥಾನಗಳು ಕೇವಲ ಒಂದು ಅಥವಾ ಬೆಸ ಸಂಖ್ಯೆಯಲ್ಲಿದ್ದಲ್ಲಿ, ಆ ಒಂದು ಅಥವಾ ಅಂತಿಮವಾಗಿ ಉಳಿಯುವ ಬೆಸ ಸಂಖ್ಯೆಯ ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸುವಂತಿಲ್ಲ.

7) ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಮೀಸಲಾತಿಯನ್ನು ಹಾಗೂ ಸಾಮಾನ್ಯ (ಮೀಸಲೇತರ) ಸ್ಥಾನಗಳ ಪ್ರಮಾಣವನ್ನು ಆಯಾ ನಗರ ಪಾಲಿಕೆ ಮಟ್ಟದಲ್ಲಿ ಕಾಯ್ದುಕೊಳ್ಳತಕ್ಕದ್ದು.

8) ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯಲ್ಲಿನ ಆಯಾ ನಗರ ಪಾಲಿಕೆಯಲ್ಲಿ ಮೇಲಿನ ಕ್ರಮ ಸಂಖ್ಯೆ (7)ರಂತೆ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳಲ್ಲಿ ಶೇ.80 ರಷ್ಟು ಸ್ಥಾನಗಳನ್ನು ಪ್ರವರ್ಗ 'ಎ' ಅಡಿಯ ಅಭ್ಯರ್ಥಿಗಳಿಗಾಗಿ ಹಾಗೂ ಇನ್ನುಳಿದ ಶೇ.20 ರಷ್ಟು ಸ್ಥಾನಗಳನ್ನು ಪ್ರವರ್ಗ 'ಬಿ' ಅಡಿಯ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು.

9) ಹಿಂದುಳಿದ ಪ್ರವರ್ಗ 'ಎ' ಮತ್ತು ಹಿಂದುಳಿದ ಪ್ರವರ್ಗ 'ಬಿ' ಗಳಲ್ಲಿ ಪ್ರತ್ಯೇಕವಾಗಿ ಮೀಸಲಾದ ಸ್ಥಾನಗಳಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು. ಒಂದು ವೇಳೆ ಹಿಂದುಳಿದ ಪ್ರವರ್ಗ 'ಎ' ಮತ್ತು ಹಿಂದುಳಿದ ಪ್ರವರ್ಗ 'ಬಿ' ಗಳಿಗೆ ಮೀಸಲಾದ ಸ್ಥಾನಗಳು ಕೇವಲ ಒಂದು ಅಥವಾ ಬೆಸ ಸಂಖ್ಯೆಯಲ್ಲಿದ್ದಲ್ಲಿ, ಆ ಒಂದು ಅಥವಾ ಅಂತಿಮವಾಗಿ ಉಳಿಯುವ ಬೆಸ ಸಂಖ್ಯೆಯ ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸುವಂತಿಲ್ಲ.

10) ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯಲ್ಲಿನ ಆಯಾ ನಗರ ಪಾಲಿಕೆಯಲ್ಲಿ ಮೇಲ್ಕಂಡ ರೀತಿಯಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ಪ್ರವರ್ಗ 'ಎ' ಮತ್ತು ಹಿಂದುಳಿದ ಪ್ರವರ್ಗ 'ಬಿ' ಗಳಿಗೆ ಹಂಚಿಕೆ ಮಾಡಿ ಉಳಿದ ಸ್ಥಾನಗಳನ್ನು ಮೀಸಲೇತರ (ಸಾಮಾನ್ಯ) ಪ್ರವರ್ಗವೆಂದು ವರ್ಗೀಕರಿಸತಕ್ಕದ್ದು.

11) ಮೀಸಲೇತರ (ಸಾಮಾನ್ಯ) ಪ್ರವರ್ಗದ ಸ್ಥಾನಗಳಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು. ಒಂದು ವೇಳೆ ಮೀಸಲೇತರ (ಸಾಮಾನ್ಯ) ಪ್ರವರ್ಗದ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಸ್ಥಾನಗಳು ಬೆಸ ಸಂಖ್ಯೆಯಲ್ಲಿದ್ದಲ್ಲಿ, ಅಂತಿಮವಾಗಿ ಉಳಿಯುವ ಬೆಸ ಸಂಖ್ಯೆಯ ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸುವಂತಿಲ್ಲ.

12) ಮುಂದಿನ ಚುನಾವಣೆಯ ವೇಳೆಗೆ ವಾರ್ಡುಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವಾಗ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನಗಳನ್ನು ಪುನರಾವರ್ತನೆಯಾಗದಂತೆ ನಗರ ಪಾಲಿಕೆಯ ಬೇರೆ ಬೇರೆ ವಾರ್ಡುಗಳಿಗೆ ಸರದಿಯ ಮೂಲಕ ಮೀಸಲಾತಿಯನ್ನು ಹಂಚಿಕೆ ಮಾಡತಕ್ಕದ್ದು. ಮೀಸಲೇತರ (ಸಾಮಾನ್ಯ) ಸ್ಥಾನಗಳಿಗೆ ಸಂಬಂಧಿಸಿದಂತೆ ಪುನರಾವರ್ತನೆಯೆಂದು ಪರಿಗಣಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಂದಕುಮಾರ್ ಬಿ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಜಿಬಿಎ & ಬೆಂಗಳೂರು ನಗರ ಪಾಲಿಕೆಗಳು-2
ಮತ್ತು ಸಮನ್ವಯ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH